# ಮುಚ್ಚಳಿಕೆ ಪತ್ರ

[ಪಾಲಕರು/ ಪೋಷಕರಿಂದ ರೂ. 50/– ಬಾಂಡ್ ಕಾಗದದ ಮೇಲೆ ಬರೆದುಕೊಡುವದು]

ನಾನು ಶ್ರೀ / ಶ್ರೀಮತಿ ______________________________ ತಂದೆ:______________ ವಯಸ್ಸು : __________ ವೃತ್ತಿ: ______________________ ವಿಳಾಸ: ____________________________ ಈ ಮೂಲಕ ಕೆಳಗಿನಂತೆ ಮುಚ್ಚಳಿಕೆ ಬರೆದುಕೊಡುತ್ತೇನೆ.

ಈ ದಿನ ನಾನು ನನ್ನ ಮಗಳು/ ಪೋಷಿತೆಯಾದ ಕು. ______________________ ವರ್ಗ__________ ಜೊತೆ ಕಿತ್ತೂರ ರಾಣಿ ಚನ್ನಮ್ಮ ಬಾಲಕಿಯರ ವಸತಿ ಸೈನಿಕ ಶಾಲೆ, ಕಿತ್ತೂರ ಇಲ್ಲಿಗೆ ಖುದ್ದಾಗಿ ಬೇಟಿ ನೀಡಿರುತ್ತೇನೆ ಹಾಗೂ ಶಾಲಾ ಆಡಳಿತದವರು ಕೋವಿಡ್ 19 ಹರಡುವಿಕೆಯನ್ನು ತಡೆಗಟ್ಟಲು ಕೈಗೊಂಡಿರುವ ಮುನ್ನೆಚ್ಚರಿಕೆ ಕ್ರಮಗಳನ್ನು ಪರಿಶಿಲಿಸಿರುತ್ತೇನೆ. ಅಲ್ಲದೇ ನಾನು ವಸತಿ ನಿಲಯಗಳು, ಭೋಜನಾಲಯ ಹಾಗೂ ಶಾಲಾ ಆವರಣದಲ್ಲಿ ವಿದ್ಯಾರ್ಥಿನಿಯರ ಚಿಕಿತ್ಸೆಗಾಗಿ ನಿರ್ಮಿಸಲಾಗಿರುವ ಆರೋಗ್ಯ ಕೇಂದ್ರಕ್ಕೆ ಸಹ ಬೇಟಿ ನೀಡಿರುತ್ತೇನೆ. ಶಾಲಾ ಆಡಳಿತದವರು ವಿದ್ಯಾರ್ಥಿನಿಯರ ಪರ ವಿಶೇಷ ಕಾಳಜಿ ತೋರಿ ನನ್ನ ಮಗಳು/ಪೋಷಿತೆಯ ವಸತಿಗಾಗಿ ಮಾಡಿರುವ ವ್ಯವಸ್ಥೆ ಹಾಗೂ ಒದಗಿಸಿರುವ ಆರೋಗ್ಯ ಸೌಲಭ್ಯಗಳ ಕುರಿತು ನಾನು ಸಂಪೂರ್ಣ ತೃಪ್ತನಾಗಿರುತ್ತೇನೆ.

ನಾನು ಈ ಮೂಲಕ ಪ್ರಮಾಣೀಕರಿಸುವದೇನೆಂದರೆ, ಶಾಲಾ ಆಡಳಿತದವರು ಎಲ್ಲ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡ ಹೊರತಾಗಿಯೂ ಭವಿಷ್ಯದಲ್ಲಿ ನನ್ನ ಮಗಳು/ ಪೋಷಿತೆಯಾದ ಕು. ____________________ ಯ ಆರೋಗ್ಯ ಸ್ಥಿತಿಯಲ್ಲಿ ಏನಾದರೂ ಏರುಪೇರಾದರೆ ನಾನು ಯಾವುದೇ ಸಂದರ್ಭದಲ್ಲಿ ಶಾಲಾ ಆಡಳಿತದವರನ್ನು ಹೊಣೆಗಾರರನ್ನಾಗಿಸುವದಿಲ್ಲ. ಅಲ್ಲದೇ ನಾನು ಈ ಮೂಲಕ ಪ್ರಮಾಣಿಕರಿಸುವದೇನೆಂದರೆ, ಯಾವುದೇ ಸಂದರ್ಭದಲ್ಲಿ ನನಗೆ ಅಥವಾ ನನ್ನ ಮಗಳಿಗೆ ನಷ್ಟ ಉಂಟಾದರೆ ಆ ನಷ್ಟವನ್ನು ಭರಿಸುವಂತೆ ಕೇಳುವದಿಲ್ಲ. ನಾನು ಎಲ್ಲ ಅಪಾಯದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸ್ವಯಂ ಜವಾಬ್ದಾರಿಯ ಮೇಲೆ ನನ್ನ ಮಗಳು/ ಪೋಷಿತೆಯನ್ನು ಕಿತ್ತೂರ ರಾಣಿ ಚನ್ನಮ್ಮ ಬಾಲಕಿಯರ ವಸತಿ ಸೈನಿಕ ಶಾಲೆಗೆ ದಾಖಲಿಸಿದ್ದೇನೆ.

ಮೇಲಿನ ಎಲ್ಲ ಅಂಶಗಳನ್ನು ನನಗೆ ಓದಿ ಹೇಳಲಾಗಿದ್ದು ನನಗಿರುವ ಜ್ಞಾನ, ನಂಬುಗೆ ಹಾಗೂ ಮಾಹಿತಿಗಳ ಪ್ರಕಾರ ಎಲ್ಲ ಅಂಶಗಳು ಸತ್ಯ ಹಾಗೂ ಸರಿಯಾಗಿದೆ.

_________________________

ಪಾಲಕರು/ ಪೋಷಕರ ಸಹಿ

ಸ್ಥಳ: ಕಿತ್ತೂರ

ದಿನಾಂಕ:

ಸಾಕ್ಷಿದಾರರು:________________